# ನಗರಸಭಾ ಕಾರ್ಯಾಲಯ, ಚಿತ್ರದುರ್ಗ

ಫೋನ್ ನಂ:08194–222401, ಸಹಾಯವಾಣಿ: 08194–221588,
ಫ್ಯಾಕ್ಸ್: 08194–221790, Website: www.chitradurgacity.gov.in


ನಂ:ನಸಚಿ/ಐಡಿಎಸ್ಎಂಟಿ/ಮಳಿಗೆ ಹರಾಜ್/01/2009–10, ದಿನಾಂಕ: 15–12–2009

## ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳ ಮರು ಬಹಿರಂಗ ಹರಾಜ್ ಪ್ರಕಟಣೆ

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ,

ಚಿತ್ರದುರ್ಗ ನಗರಸಭೆಗೆ ಸೇರಿದ ರಾಷ್ಟ್ರೀಯ ಹೆದ್ದಾರಿ–4ರ ಬಲಭಾಗದಲ್ಲಿರುವ ಐ.ಯು.ಡಿ.ಪಿ. ಬಡಾವಣೆಯಲ್ಲಿ ಹೊಸದಾಗಿ ನಿರ್ಮಿಸಿರುವ ಐ.ಡಿ.ಎಸ್.ಎಂ.ಟಿ. ಯೋಜನೆಯ ಮಳಿಗೆಗಳನ್ನು ಅನುಬಂಧದಲ್ಲಿ ವಿವರಿಸಿರುವಂತೆ ದಿನಾಂಕ: 23–12–2009 ರಂದು ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ವಾಣಿಜ್ಯ ಮಳಿಗೆಗಳ ಸ್ಥಳದಲ್ಲಿಯೇ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು (ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಐ.ಡಿ.ಎಸ್.ಎಂ.ಟಿ. ಛೇರ್ಮನ್‌ರವರ ಸಮ್ಮುಖದಲ್ಲಿ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳ ಸಮ್ಮುಖದಲ್ಲಿ) ವಾಣಿಜ್ಯ ಮಳಿಗೆಗಳ ಗುತ್ತಿಗೆ/ಬಾಡಿಗೆ ಮೇರೆಗೆ ನೀಡಲು ಬಹಿರಂಗ ಹರಾಜ್ ಮೂಲಕ ವಿಲೇ ಪಡಿಸಲಾಗುವುದು. ಇಷ್ಟವುಳ್ಳವರು ಬಹಿರಂಗ ಹರಾಜ್‌ನಲ್ಲಿ ಭಾಗವಹಿಸಿ ಪಡೆಯಬಹುದಾಗಿದೆ.

### ಮಳಿಗೆಗಳ ವಿವರ

| ಕ್ರ. ಸಂ. | ಮಳಿಗೆ ಸಂಖ್ಯೆ | ಮಳಿಗೆಗಳ ಅಳತೆ ಅಡಿಗಳಲ್ಲಿ | ಮಳಿಗೆಗಳ ಒಟ್ಟು ವಿಸ್ತೀರ್ಣ | ವ್ಯಾಪಾರಕ್ಕಾಗಿ ಮಳಿಗೆಗಳನ್ನು ಕಾಯ್ದಿರಿಸಲಾದ ವಿವರ | ನಿಗಧಿಪಡಿಸಿದ ಬಾಡಿಗೆ ಮೊತ್ತ | ಮರು ಪಾವತಿ ಇಲ್ಲದ ಪ್ರಿಮಿಯಂ ಮೊತ್ತ |
|---|---|---|---|---|---|---|
| 1 | 01 | 11'10"X27'9" | 328.37 | ಹಾರ್ಡ್‌ವೇರ್ ಮತ್ತು ಸ್ಯಾನಿಟರಿ | 2300x2=4600/– | 32837–00 |
| 2 | 03 | 11'9"X15' | 176.25 | ಟೆಕ್ಸ್‌ಟೈಲ್ ರೆಡಿಮೆಡ್ | 2470/– | 17625–00 |
| 3 | 08 | 11'10"X12' | 142 | ಇತರೆ/ಯಾವುದೇ ಉದ್ದೇಶಕ್ಕಾಗಿ | 1700/– | 12780–00 |
| 4 | 10 | 11'6"X12'6" | 143.75 | ಇತರೆ/ಯಾವುದೇ ಉದ್ದೇಶಕ್ಕಾಗಿ | 1725/– | 12938–00 |
| 5 | 13 | 11'9"X14'6" | 170.37 | ಇತರೆ/ಯಾವುದೇ ಉದ್ದೇಶಕ್ಕಾಗಿ | 2050/– | 15333–00 |
| 6 | 14 | 11'6"X14'6" | 166.75 | ಇತರೆ/ಯಾವುದೇ ಉದ್ದೇಶಕ್ಕಾಗಿ | 2000/– | 15008–00 |
| 7 | 15 | 11'6"X14'6" | 166.75 | ಇತರೆ/ಯಾವುದೇ ಉದ್ದೇಶಕ್ಕಾಗಿ | 2000/– | 15008–00 |
| 8 | 16 | 20'6"X14'6" | 297.25 | ಕಿರಾಣಿ ಅಂಗಡಿ/ಜನರಲ್ ಸ್ಟೋರ್ | 4165/– | 29725–00 |
| 9 | 17 | 9.66"X12" | 115.92 | ತರಕಾರಿ ಅಂಗಡಿ | 1625/– | 11592–00 |
| 10 | 18 | 9.9"X12' | 117 | ಇತರೆ/ಯಾವುದೇ ಉದ್ದೇಶಕ್ಕಾಗಿ | 1400/– | 10530–00 |
| 11 | 19 | 11.6"X12' | 138 | ಇತರೆ/ಯಾವುದೇ ಉದ್ದೇಶಕ್ಕಾಗಿ | 1650/– | 12420–00 |
| 12 | 20 | 11.6"X12' | 138 | ಇತರೆ/ಯಾವುದೇ ಉದ್ದೇಶಕ್ಕಾಗಿ | 1650/– | 12420–00 |
| 13 | 21 | 11.9"X12' | 141 | ಇತರೆ/ಯಾವುದೇ ಉದ್ದೇಶಕ್ಕಾಗಿ | 1690/– | 12690–00 |

### ಹರಾಜು ಷರತ್ತುಗಳು

1. ರೂ. 20,000/– ಗಳನ್ನು ಹರಾಜ್‌ನಲ್ಲಿ ಭಾಗವಹಿಸುವ ಮುಂಚಿತವಾಗಿ ತಾತ್ಕಾಲಿಕ ಠೇವಣಿ ಕಟ್ಟತಕ್ಕದ್ದು ಹಾಗೂ ಬಹಿರಂಗ ಹರಾಜ್ ಅಂತಿಮ ಬಿಡ್‌ದಾರರಿಗೆ ಹೊರತುಪಡಿಸಿ ಬೇರೆಯವರಿಗೆ ಠೇವಣಿ ಹಿಂದಿರುಗಿಸಲಾಗುವುದು (ರೂ.20,000/– ಗಳ ಡಿ.ಡಿ.ಯನ್ನು ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ ಇವರ ಹೆಸರಿನಲ್ಲಿ ತೆಗೆಯತಕ್ಕದ್ದು.)
2. ಹರಾಜ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಪ್ರತಿಯೊಂದು ಮಳಿಗೆಗೆ ಮರು ಪಾವತಿ ಇಲ್ಲದ ಪ್ರಿಮಿಯಂ ಹಣ ಮೇಲ್ಪಟ್ಟು ಹರಾಜು ಕೂಗತಕ್ಕದ್ದು.

– 2

3. ಬಿಡ್‌ದಾರರು ಯಾವುದೇ ಕಾರಣಕ್ಕೂ ಒಳಬಾಡಿಗೆ ಕೊಡುವಂತಿಲ್ಲ.
4. ಬಿಡ್‌ದಾರರು ನಗರಸಭೆಯಿಂದ ನಿಗಧಿಪಡಿಸಿರುವ ಉಪಯೋಗಕ್ಕೆ ಮಾತ್ರ ಮಳಿಗೆಯನ್ನು ಉಪಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಇದನ್ನು ಬದಲಾಯಿಸುವಂತಿಲ್ಲ.
5. ಗುತ್ತಿಗೆ ಅವಧಿ 20 ವರ್ಷಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಗುತ್ತಿಗೆ ಅವಧಿ ಮುಗಿದ ನಂತರ ಮಳಿಗೆಗಳನ್ನು ನಗರಸಭೆಯ ವಶಕ್ಕೆ ಪಡೆಯಲಾಗುವುದು.
6. ಬಾಡಿಗೆ ಮೊತ್ತವನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ಶೇಕಡ 10 ರಂತೆ ಬಾಡಿಗೆ ಮೊತ್ತದ ಮೇಲೆ ಹೆಚ್ಚಿಸಲಾಗುವುದು.
7. ಬಿಡ್‌ದಾರರು ಮಳಿಗೆ ಹರಾಜ್‌ನಲ್ಲಿ ಪಡೆದ ಬಾಡಿಗೆ ಮೊತ್ತದ ಪ್ರಕಾರ ಪ್ರತಿ ವರ್ಷ ಬಾಡಿಗೆ ಮೊತ್ತದ ಅಂದರೆ 10 ತಿಂಗಳ ಬಾಡಿಗೆಯ ಹಣವನ್ನು ಮುಂಗಡವಾಗಿ ಪಾವತಿಸತಕ್ಕದ್ದು. ತಪ್ಪಿದಲ್ಲಿ ಪ್ರತಿ ತಿಂಗಳ ಬಾಡಿಗೆ ಮೇಲೆ ಶೇಕಡ 5 ರಷ್ಟು ದಂಡ ವಿಧಿಸಲಾಗುವುದು. ಅಂತಿಮ ಬಿಡ್‌ದಾರರು ಮರು ಪಾವತಿ ಇಲ್ಲದ ಹಣ ಹರಾಜಿನ ಮೊತ್ತವನ್ನು 2 ವಾರದೊಳಗಾಗಿ ಪಾವತಿಸತಕ್ಕದ್ದು. ಪಾವತಿಸದೇ ಇದ್ದಲ್ಲಿ ಅಂಥಹವರ ಹರಾಜ್‌ನ್ನು ರದ್ದುಗೊಳಿಸಿ ದುಸರ ಹರಾಜ್ ಮಾಡಲಾಗುವುದು.
8. ಬಿಡ್‌ದಾರರು ಹರಾಜನ್ನು ವಿವಿಧ ಮಳಿಗೆಗಳಿಗೆ ಗೊತ್ತುಪಡಿಸಿರುವ ವ್ಯವಹಾರಕ್ಕೆ ನಿಗಧಿಪಡಿಸಿರುವ ಬಿಡ್‌ನಂತೆ ಸಂಬಂಧಪಟ್ಟ ವ್ಯವಹಾರದ ಉದ್ದಿಮೆ ಪರವಾನಿಗೆಯನ್ನು ನಗರಸಭೆಯಿಂದ ಕಡ್ಡಾಯವಾಗಿ ಪಡೆದು(ಉದ್ದಿಮೆ ಪರವಾನಗೆ ಪತ್ರ) ಉದ್ದಿಮೆ ಪ್ರಾರಂಭಿಸತಕ್ಕದ್ದು.
9. ಗುತ್ತಿಗೆ ಪಡೆದ ಬಾಡಿಗೆದಾರರು ನೀರಿನ ತೆರಿಗೆ ಮತ್ತು ವಿದ್ಯುತ್ ಬಿಲ್‌ನ್ನು ಸಂಬಂಧಪಟ್ಟ ಇಲಾಖೆಗಳಿಗೆ ಬಿಡ್‌ದಾರರೇ ಪಾವತಿಸತಕ್ಕದ್ದು. ಹಾಗೂ ಬಿಡ್‌ದಾರರು ಒಳಭಾಡಿಗೆಯನ್ನು ನೀಡಿದ್ದಲ್ಲಿ ಗುತ್ತಿಗೆ ಅವಧಿಯನ್ನು ರದ್ದುಪಡಿಸಲಾಗುವುದು.
10. ಗುತ್ತಿಗೆ/ಬಾಡಿಗೆದಾರರು ಯಾವುದೇ ಕಾರಣಕ್ಕೂ ತಾವು ಬಾಡಿಗೆ ಪಡೆದ ಮಳಿಗೆಯನ್ನು ಆಧಾರ/ಭೋಗ್ಯ ಮಾಡಕೂಡದು.
11. ಗುತ್ತಿಗೆದಾರರು ಮೂಲ ಕಟ್ಟಡಕ್ಕೆ ಯಾವುದೇ ಶಾಶ್ವತ ಬದಲಾವಣೆ ಮಾಡತಕ್ಕದ್ದಲ್ಲ. ಕೇವಲ ತಾತ್ಕಾಲಿಕ ಬದಲಾವಣೆಗಳನ್ನು ಮಾತ್ರ ಕಚೇರಿ ಗಮನಕ್ಕೆ ತಂದು ಮಾಡಿಕೊಳ್ಳಬಹುದಾಗಿರುತ್ತದೆ.
12. ಗುತ್ತಿಗೆ/ಬಾಡಿಗೆದಾರರು ನಗರಸಭೆಯ ಮಳಿಗೆಗಳಿಗೆ ಯಾವುದೆ ತರಹದ ಹಾನಿಯಾಗದಂತೆ ಇಟ್ಟುಕೊಳ್ಳತಕ್ಕದ್ದು. ಹಾಗೇನಾದರು ಹಾನಿಪಡಿಸಿದಲ್ಲಿ ಸಂಬಂಧಿಸಿದ ಲೀಜ್‌ದಾರರಿಂದ ದುರಸ್ಥಿ ಬಗ್ಗೆ ವಸೂಲಿ ಕ್ರಮ ಕೈಗೊಳ್ಳಲಾಗುವುದು.
13. ಗುತ್ತಿಗೆ/ಬಾಡಿಗೆದಾರರು ಮಳಿಗೆಗಳ ಹಿಂಭಾಗ/ಮುಂಭಾಗದಲ್ಲಿ ಹೆಚ್ಚುವರಿಯಾಗಿ ಜಾಗವನ್ನು ಒತ್ತುವರಿ ಮಾಡಬಾರದು ಹಾಗೂ ಸಾರ್ವಜನಿಕರು ಓಡಾಡಲು ಅನಾನುಕೂಲ ಮಾಡಬಾರದು.
14. ಬಾಡಿಗೆ/ಗುತ್ತಿಗೆದಾರರು ತಮ್ಮ ಸ್ವಂತ ವಾಹನ ನಿಲ್ಲಿಸಲು ನಗರಸಭೆಗೆ ವಾರ್ಷಿಕ ಪಾರ್ಕಿಂಗ್ ಶುಲ್ಕ ಪಾವತಿಸತಕ್ಕದ್ದು.
15. ಲೀಜ್‌ದಾರರು ತಮ್ಮ ಅಂಗಡಿಗಳ ಮುಂಭಾಗ ಕಾನೂನಿನ ಅನ್ವಯ ನಾಮಫಲಕಗಳನ್ನು ನಗರಸಭೆಯ ಅನುಮತಿ ಪಡೆದು ಹಾಕತಕ್ಕದ್ದು.
16. ಸದರಿ ಬಹಿರಂಗ ಹರಾಜ್‌ನ್ನು ಸ್ಥಿರೀಕರಿಸುವ ಅಧಿಕಾರ ಛೇರ್ಮನ್, ಐ.ಡಿ.ಎಸ್.ಎಂ.ಟಿ. ಸಮಿತಿ ಹಾಗೂ ಜಿಲ್ಲಾಧಿಕಾರಿಗಳು, ಇವರಿಗೆ ಒಳಪಟ್ಟಿರುತ್ತದೆ.

**ಸೂಚನೆ:–** ಹೆಚ್ಚಿನ ವಿವರಗಳಿಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ವಿವರ ಪಡೆಯಬಹುದಾಗಿರುತ್ತದೆ.

**ಸಹಿ/–**
**(ಎಸ್. ವಿಜಯಕುಮಾರ್)**
**ಸದಸ್ಯ ಕಾರ್ಯದರ್ಶಿ**
**ಐ.ಡಿ.ಎಸ್.ಎಂ.ಟಿ. ಸಮಿತಿ ಹಾಗೂ**
**ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ**

**ಸಹಿ/–**
**(ಅಮ್ಲಾನ್ ಆದಿತ್ಯ ಬಿಸ್ವಾಸ್)** ಭಾ.ಆ.ಸೇ.
**ಛೇರ್ಮನ್**
**ಐ.ಡಿ.ಎಸ್.ಎಂ.ಟಿ. ಸಮಿತಿ,**
**ಹಾಗೂ ಜಿಲ್ಲಾಧಿಕಾರಿಗಳು, ಚಿತ್ರದುರ್ಗ.**